**CC 486/2023**

## ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಹೊಸಪೇಟೆ.

**ಸಿಸಿ ನಂಬರ್** 486/2023

**ಸಿ ಡಬ್ಲ್ಯೂ:** 7

**ಪಿ ಡಬ್ಲೂ:** 4

**ಸಾಕ್ಷಿಯ ಹೆಸರು -** **ಶ್ರೀರಾಮರೆಡ್ಡಿ**
**ತಂದೆಯ ಹೆಸರು -** **ಕೆ. ಲಕ್ಷ್ಮೀ ನಾರಾಯಣ ಮೂರ್ತಿ**
**ವಯಸ್ಸು -** 52 **ವರ್ಷಗಳು**
**ಉದ್ಯೋಗ -** **ಮುಖ್ಯ ಪೇದೆ, ಸಂಚಾರಿ ಪೋ.ಠಾ.**
**ವಾಸಸ್ಥಳ -** **ಹೊಸಪೇಟೆ**

**ಸಾಕ್ಷಿಯನ್ನು ದಿನಾಂಕ:** 21-08-2025 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಎ. ಪಿ. ಪಿ. ಅವರಿಂದ**

ನಾನು ದಿಃ **01-11-2019** ರಿಂದ **10-06-2025** ರವರೆಗೆ ಹೊಸಪೇಟೆ ಪಟ್ಟಣ ಪೋಲಿಸ್ ಠಾಣೆಯಲ್ಲಿ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ **18-10-2022** ರಂದು ನಾನು, ಚಾಸಾ **-6, 8** ಮತ್ತು **9** ರವರು ಠಾಣೆಯಲ್ಲಿದ್ದಾಗ ಚಾಸಾ **-1** ರವರು ತಮಗೆ ಬಂದಂತಹ ಮಾಹಿತಿಯನ್ನು ತಿಳಿಸಿದರು. ಚಾಸಾ **-8** ರವರಿಂದ ಇಬ್ಬರು ಪಂಚರನ್ನು ಠಾಣೆಗೆ ಕರೆಸಿಕೊಂಡರು. ನಾವುಗಳೆಲ್ಲಾ ಸಂಜೆ **05.45** ಗಂಟೆಗೆ ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣ ಹೊಸಪೇಟೆಗೆ ಹೋಗಿರುತ್ತೇವೆ. ನಾವುಗಳು ಪ್ಲಾಟ್ ಫಾರಂ ಗಳಲ್ಲಿ ತಿರುಗಾಡಿ ಮಾಹಿತಿ ಬಗ್ಗೆ ವಿಚಾರಣೆ ಮಾಡಿರುತ್ತೇವೆ. ಸಂಜೆ **06.00** ಗಂಟೆಗೆ ಬಸ್ ನಿಲ್ದಾಣದ ಪಾರ್ಸಲ್ ಕಚೇರಿ ಮುಂಭಾಗದಲ್ಲಿ ಮೂವರು ವ್ಯಕ್ತಿಗಳು ಅನುಮಾನಾಸ್ಪದವಾಗಿ ಕಂಡು ಬಂದರು. ಸದರಿಯವರನ್ನು ಚಾಸಾ **-1** ರವರ ಆದೇಶದಂತೆ ನಾನು, ಚಾಸಾ **-6, 8** ಮತ್ತು **9** ರವರು ಹಿಡಿಯಲು ಹೋದೆವು. ನಮಗೆ **1** ಮತ್ತು **2** ನೇ ಆರೋಪಿತರು ಸಿಕ್ಕರು. **3** ನೇ ಆರೋಪಿ ಓಡಿ ಹೋದ.

ಸಿಕ್ಕ ಆರೋಪಿತರ ಹೆಸರುಗಳನ್ನು ಕೇಳಲಾಗಿ ನಾಗರಾಜ ಮತ್ತು ಕಿರಣ್ ಎಂದು ತಿಳಿಸಿದರು. ಓಡಿ ಹೋದ ವ್ಯಕ್ತಿಯ ಹೆಸರು ತಿಮ್ಮಪ್ಪ ಎಂದು ತಿಳಿಸಿದರು. ಚಾಸಾ **-1** ರವರು **1** ನೇ ಆರೋಪಿಯ ಬಳಿ ಇದ್ದ **2.606** ಕೆ ಜಿ ತೂಕದ ನಕಲಿ ಬಂಗಾರದ ನಾಣ್ಯಗಳನ್ನು, ರೂ. **2,000/-** ನಗದು ಹಣ, ಲಾವಾ ಮೊಬೈಲ್ ಫೋನ್ ಜಪ್ತು ಪಡಿಸಿಕೊಂಡರು. ಈ ಬಗ್ಗೆ ಪಂಚನಾಮೆ ಮಾಡಿರುತ್ತಾರೆ. ಸದರಿ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿ ಪಂಚನಾಮೆ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿಃ **1** ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿಃ **1 (ಡಿ)** ಎಂದು ಗುರುತಿಸಲಾಯಿತು.

ಕಚ್ಚಾ ನಕಾಶೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಕಚ್ಚಾ ನಕಾಶೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿಃ **2** ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿಃ **2(ಡಿ)** ಎಂದು ಗುರುತಿಸಲಾಯಿತು.

ಸಾಕ್ಷಿ ನಿಪಿಃ **3** ರ ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಮು ಮಾ **1** ರಿಂದ **3** ನ್ನು ನೋಡಿ ಗುರುತಿಸಿರುತ್ತಾರೆ. ನಂತರ ನಾವು ಠಾಣೆಗೆ ಹಿಂತಿರುಗಿರುತ್ತೇವೆ. ಚಾಸಾ **-1** ರವರು ದೂರು ನೀಡಿರುತ್ತಾರೆ.

ದಿಃ **19-10-2022** ರಂದು ಚಾಸಾ **-12** ರವರು ನನ್ನನ್ನು, ಚಾಸಾ **-6** ರವರನ್ನು **1** ನೇ ಆರೋಪಿ ಕರೆದುಕೊಂಡು ಹೋದ ಕೂಡ್ಲಗಿಯಲ್ಲಿನ ಆತನ ಬೆಳ್ಳಿ ಮತ್ತು ಬಂಗಾರದ ಆಭರಣಗಳ ಅಂಗಡಿಗೆ ಬೆಳಿಗ್ಗೆ **09.30** ಗಂಟೆಗೆ ಠಾಣೆಯಿಂದ ಹೊರಟು **10.30** ಗಂಟೆಗೆ ಸ್ಥಳಕ್ಕೆ ಹೋಗಿರುತ್ತೇವೆ. **1** ನೇ ಆರೋಪಿಯು ಸದರಿ ಸ್ಥಳದಲ್ಲಿ **3** ನೇ ಆರೋಪಿ ತಂದು ಕೊಟ್ಟಿದ್ದ ಹಿತ್ತಾಳೆ ಶೀಟ್ ಗಳಿಂದ ಪ್ರಕರಣದಲ್ಲಿ ಜಪ್ತು ಪಡಿಸಿಕೊಳ್ಳಲಾದ ನಾಣ್ಯಗಳನ್ನು ಯಾವ ರೀತಿ ತಯಾರಿಸಲಾಗುತ್ತದೆ ಎಂದು ಉಪಕರಣಗಳನ್ನು ಬಳಸಿ ತೋರಿಸಿಕೊಟ್ಟ.

**CC 486/2023**

**ಸಿ ಡಬ್ಲ್ಯೂ: 7**

**ಪಿ ಡಬ್ಲೂ: 4**

ಸ್ಥಳದಲ್ಲಿಯೇ ಆತ ಉಪಯೋಗಿಸಿದ ಕಬ್ಬಿಣದ ಬಿಟ್ ಗಳನ್ನು ಪಂಚರ ಸಮಕ್ಷಮ ಸ್ಥಳದಲ್ಲಿ ಪಂಚನಾಮೆ ಮಾಡಿ ಜಪ್ತು ಪಡಿಸಿಕೊಳ್ಳಲಾಯಿತು. ಸದರಿ ಪಂಚನಾಮೆ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಪಂಚನಾಮೆ ನೋಡಿ ಗುರುತಿಸಿದ್ದು, ಅದನ್ನು ನಿಪಿಃ **7** ಎಂದು, ಸಾಕ್ಷಿಯ ಸಹಿಯನ್ನು ನಿಪಿಃ **7 (ಎ)** ಎಂದು ಗುರುತಿಸಲಾಯಿತು.

ಕಚ್ಚಾ ನಕಾಶೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಕಚ್ಚಾ ನಕಾಶೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿಃ **5** ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿಃ **5(ಸಿ)** ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿಃ **6** ರ ಫೋಟೋ ನೋಡಿ ಗುರುತಿಸಿರುತ್ತಾರೆ. ಕಬ್ಬಿಣದ ಬಿಟ್ ಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಮು ಮಾ **4** ಮತ್ತು **5** ಎಂದು ಗುರುತಿಸಲಾಯಿತು.

ದಿಃ **14-11-2022** ರಂದು **3** ನೇ ಆರೋಪಿ ನ್ಯಾಯಾಲಯದಿಂದ ಜಾಮೀನು ಪಡೆದು ಠಾಣೆಗೆ ಹಾಜರಾಗಿದ್ದರು. **3** ನೇ ಆರೋಪಿ ಚಾಸಾ **-12** ರವರಿಗೆ ತಾನು ಪ್ರಭಾವಳಿ ಹಿತ್ತಾಳೆ ಪ್ಲೇಟ್ ಗಳನ್ನು ಖರೀದಿಸಿ ತರುತ್ತಿದ್ದ ಅಂಗಡಿ ತೋರಿಸುವುದಾಗಿ ತಿಳಿಸಿದ್ದರಿಂದ ಪಂಚರನ್ನು ಮತ್ತು ನನ್ನನ್ನು ಚಾಸಾ **-12** ರವರು ಆ ಆರೋಪಿ ಕರೆದುಕೊಂಡು ಹೋದ ಸ್ಥಳವಾದ ನಾಯಕನಹಟ್ಟಿ ಗ್ರಾಮದ ಚಂದನ್ ಮೆಟಲ್ ಸ್ಟೋರ್ಸ್ ಗೆ ಕರೆದುಕೊಂಡು ಹೋದರು. ಸದರಿ ಸ್ಥಳದಲ್ಲಿ ಪಂಚನಾಮೆಯನ್ನು ಮಾಡಲಾಗಿತ್ತು. ಸಾಕ್ಷಿ ಪಂಚನಾಮೆ ನೋಡಿ ಗುರುತಿಸಿದ್ದು, ಅದನ್ನು ನಿಪಿಃ **8** ಎಂದು, ಸಾಕ್ಷಿಯ ಸಹಿಯನ್ನು ನಿಪಿಃ **8 (ಎ)** ಎಂದು ಗುರುತಿಸಲಾಯಿತು.

ಕಚ್ಚಾ ನಕಾಶೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಕಚ್ಚಾ ನಕಾಶೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿಃ 9 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 9(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಫೋಟೋ ನೋಡಿ ಗುರುತಿಸಿದ್ದು, ಅದನ್ನು ನಿಪಿಃ 10 ಎಂದು ಗುರುತಿಸಲಾಯಿತು. ನಾನು ಚಾಸಾ -12 ರವರಿಗೆ ತನಿಖಾ ಸಹಾಯಕ ಆಗಿ ಈ ಪ್ರಕರಣದಲ್ಲಿ ಕೆಲಸ ಮಾಡಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ 1 ಮತ್ತು 2 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ಎಸ್ ಎಂ., ವಕೀಲರಿಂದ**

ದಿಃ 18-10-2022 ರಂದು ನಾನು ಮಫ್ತಿಯಲ್ಲಿದ್ದೆ ಮತ್ತು ಉಳಿದ ಸಿಬ್ಬಂದಿಗಳೆಲ್ಲಾ ಸಮವಸ್ತ್ರ ಧರಿಸಿದ್ದರು. ಮಾಹಿತಿ ಬಂದಾಗ ಯಾವ ಸ್ಥಿತಿಯಲ್ಲಿ ಇದ್ದೇವೋ ಅದೇ ರೀತಿ ಚಾಸಾ -1 ರವರೊಂದಿಗೆ ಹೋಗಿರುತ್ತೇವೆ ಅಂದರೆ ಸರಿ. ನಾವುಗಳು ಆ ದಿನ ವಾಹನಗಳಲ್ಲಿ ಸ್ಥಳಕ್ಕೆ ಹೋಗಿರಲಿಲ್ಲ. ಸಾಕ್ಷಿ ಮುಂದುವರೆದು ನಡೆದು ಕೊಂಡು ಹೋದೆವು ಎಂದು ನುಡಿಯುತ್ತಾರೆ. ಪಂಚರನ್ನು ಚಾಸಾ -8 ರವರು ಎಲ್ಲಿಂದ ಕರೆದುಕೊಂಡು ಬಂದರು ಎಂದು ನನಗೆ ಗೊತ್ತಿಲ್ಲ. ನಾವು ಸ್ಥಳಕ್ಕೆ ಹೋಗುವಾಗ ನಮ್ಮ ಕೈ ಗಳಲ್ಲಿ ಏನು ಇರಲಿಲ್ಲ. ಸಾಕ್ಷಿ ಮುಂದುವರೆದು ನನ್ನ ಕೈಯಲ್ಲಿ ಲ್ಯಾಪ ಟಾಪ್ ಇತ್ತು ಎಂದು ನುಡಿಯುತ್ತಾರೆ. ಲ್ಯಾಪಟಾಪ್ ಹೊರತುಪಡಿಸಿ ಬೇರೆ ಏನು ಇರಲಿಲ್ಲ ಅಂದರೆ ಸರಿ.

ನಾವುಗಳು ಕೊಪ್ಪಳ, ಹಂಪಿ, ಬೆಂಗಳೂರು ಮತ್ತು ಸಂಡೂರು ಕಡೆಗೆ ಹೋಗುವ ಬಸ್ ನಿಲ್ಲುವ ಪ್ಲಾಟ್ ಫಾರಂ ಗಳಲ್ಲಿ ಓಡಾಡಿರುತ್ತೇವೆ. ಸದರಿ ಪ್ಲಾಟ್ ಫಾರಂ ಗಳಿಗೆ ಎಲ್ಲರೂ ಜೊತೆಯಾಗಿಯೇ ಹೋಗಿರುತ್ತೇವೆ. ನಾವುಗಳು 10 ನಿಮಿಷಗಳ ಕಾಲ ಹುಡುಕಾಟ ಮಾಡಿರುತ್ತೇವೆ.

ಬಸ್ ನಿಲ್ದಾಣದಲ್ಲಿ ಜನಜಂಗುಳಿ ಇತ್ತು ಅಂದರೆ ಸರಿ. ಕೆ ಎಸ್ ಆರ್ ಟಿ ಸಿ ನೌಕರರು ಮತ್ತು ಅಮಾಲರು ನಿಲ್ದಾಣದಲ್ಲಿ ಇದ್ದರು ಅಂದರೆ ಸರಿ. ಪಂಚನಾಮೆಗೆ ನಿಲ್ದಾಣದಲ್ಲಿ ಇದ್ದಂತಹ ವ್ಯಕ್ತಿಗಳನ್ನು ಕರೆದಿರಲಿಲ್ಲ ಅಂದರೆ ಸರಿ. ಆರೋಪಿತರು ಯಾವ ಬಣ್ಣದ ಬಟ್ಟೆಗಳನ್ನು ಧರಿಸಿದ್ದರು ಎಂದು ನನಗೆ ಗೊತ್ತಿಲ್ಲ. ಆ ದಿನ 1 ಮತ್ತು 2 ನೇ ಆರೋಪಿತರನ್ನು ಹಿಡಿದು, 1 ನೇ ಆರೋಪಿ ಕಡೆಯಿಂದ ಮು ಮಾ 1 ರಿಂದ 3 ನ್ನು ಜಪ್ತು ಪಡಿಸಿಕೊಂಡೆವು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ವಸ್ತುಗಳ ಮೇಲೆ ಠಾಣೆಯ ಅರಗಿನ ಶೀಲುಗಳು ಇರುವುದಿಲ್ಲ ಅಂದರೆ ಸರಿ.

ಪಂಚನಾಮೆಯನ್ನು ಕಂಪ್ಯೂಟರ್ ನಲಿಲ ಮಾಡಲಾಗಿದೆ ಅಂದರೆ ಸರಿ. ಸ್ಥಳದಲ್ಲಿ ಅದನ್ನು ಪ್ರಿಂಟ್ ಮಾಡಿಲ್ಲ ಅಂದರೆ ಸರಿಯಲ್ಲ. ಯಾವ ಪ್ರಿಂಟರ್ ನಿಂದ ಸ್ಥಳದಲ್ಲಿ ಪ್ರಿಂಟ್ ತೆಗೆಯಲಾಗಿತ್ತು ಎಂದು ನನ್ನ ಹೇಳಿಕೆಯಲ್ಲಿ ಹೇಳಿ ಬರೆಸಿಲ್ಲ. ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದಲ್ಲಿ ಆರೋಪಿತರಿಂದ ನಾಣ್ಯಗಳನ್ನು ಪಂಚರ ಸಮಕ್ಷಮ ನಿಪಿಃ 1 ರ ಪಂಚನಾಮೆಯಂತೆ ಜಪ್ತು ಪಡಿಸಿಕೊಂಡಿರುತ್ತೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಮಹಮ್ಮದ್ ಗೌಸ್ ಎಂಬ ಅಕ್ಕಸಾಲಿಗ ನಮ್ಮ ಠಾಣೆಯ ಸಾಕಷ್ಟು ಪ್ರಕರಣಗಳಲ್ಲಿ ಸಾಕ್ಷ್ಯ ನುಡಿದಿರುತ್ತಾರೆ ಅಂದರೆ ಇರಬಹುದು.

ನಿಪಿಃ 7 ರ ಪಂಚನಾಮೆಯಲ್ಲಿ ಪಂಚರ ಸಹಿಗಳು ಇರುವುದಿಲ್ಲ ಅಂದರೆ ಸರಿ. 1 ನೇ ಆರೋಪಿ ನಮ್ಮನ್ನು ಕೂಡ್ಲಗಿಯ ಅಂಗಡಿಗೆ ಕರೆದುಕೊಂಡು ಹೋಗಿ ನಾಣ್ಯಗಳನ್ನು ತಯಾರಿಸುತ್ತಿದ್ದ ಸ್ಥಳ ಮತ್ತು ತಯಾರಿಸಲು ಉಪಯೋಗಿಸುವ ಬಿಟ್ ಗಳನ್ನು ತೋರಿಸಿದ್ದ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಪಂಚರ ಸಮಕ್ಷಮ ನಿಪಿಃ **7** ರ ಪಂಚನಾಮೆ ಸ್ಥಳದಲ್ಲಿ ಆಗಿಲ್ಲ ಮತ್ತು ಠಾಣೆಯಲ್ಲಿಯೇ ಅದನ್ನು ತಯಾರಿಸಿರುತ್ತೇವೆ ಅಂದರೆ ಸರಿಯಲ್ಲ. ಪಂಚರ ಸಮಕ್ಷಮ ಮು ಮಾ **4** ಮತ್ತು **5** ನ್ನು ಜಪ್ತು ಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ.

**3** ನೇ ಆರೋಪಿ ನಾಯಕನಹಟ್ಟಿ ಗ್ರಾಮದಲ್ಲಿ ಹಿತ್ತಾಳೆ ಪ್ಲೇಟ್ ಖರೀದಿಸಿದ್ದ ಸ್ಥಳ ವನ್ನು ತೋರಿಸಿಲ್ಲ ಅಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಪಂಚರ ಸಮಕ್ಷಮ ಯಾವುದೇ ಪಂಚನಾಮೆ ಆಗಿಲ್ಲ ಅಂದರೆ ಸರಿಯಲ್ಲ. ನಿಪಿಃ **8** ರ ಪಂಚನಾಮೆಯನ್ನು ಸಹ ಠಾಣೆಯಲ್ಲಿಯೇ ಸೃಷ್ಟಿಸಿರುತ್ತೇವೆ ಅಂದರೆ ಸರಿಯಲ್ಲ.

ಆರೋಪಿತರನ್ನು ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದಲ್ಲಿ ಬಂಧಿಸಿಲ್ಲ ಮತ್ತು ಅವರ ತಾಬಾದಿಂದ ಪಂಚರ ಸಮಕ್ಷಮ ಯಾವುದೇ ಮು ಮಾ ಗಳನ್ನು ಜಪ್ತು ಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ.

ದಿಃ **19-10-2022** ರಂದು **1** ನೇ ಆರೋಪಿಯ ಅಂಗಡಿಯ ಹತ್ತಿರ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಮು ಮಾ **4** ಮತ್ತು **5** ನ್ನು ಜಪ್ತು ಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ. ದಿಃ **14-11-2022** ರಂದು ನಾಯಕನಹಟ್ಟಿಗೆ ಹೋಗಿಲ್ಲ, ನಿಪಿಃ **8** ರ ಪಂಚನಾಮೆ ಮಾಡಿಲ್ಲ ಅಂದರೆ ಸರಿಯಲ್ಲ.

ಆರೋಪಿತರು ಯಾವುದೇ ತಪ್ಪು ಮಾಡದಿದ್ದರೂ ಸಹ ಠಾಣೆಯ ಅಂಕಿ ಅಂಶಗಳಿಗಾಗಿ ಸುಳ್ಳು ಪ್ರಕರಣವನ್ನು ದಾಖಲಿಸಿ, ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ- ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.